ಇ. ಈ ಗ್ರಾಮಗಳ ಮಾಧ್ಯಮಿಕ ಶಾಲಾ ಕಟ್ಟಡ ನಿರ್ಮಾಣ ಪ್ರಾರಂಭಿಸಿ ಅಪೂರ್ಣವಾಗಲು ಕಾರಣಗಳೇನು;

ಈ. ಈ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸಲು ಸರ್ಕಾರವು ಹಾಕಿಕೊಂಡಿರುವ ಕಾಲಮಿತಿಯೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಹೌದು. ಪ್ರಾರಂಭಿಸಲಾಗಿದೆ.

ಇ. ಸರ್ಕಾರಿ ಪ್ರೌಢಶಾಲೆ ಅವರಗೋಳ ಕಟ್ಟಡ ಲಿಂಟಲ್‌ವರೆಗೆ ಮುಗಿದಿದೆ.

ಈ. ಸರ್ಕಾರಿ ಪ್ರೌಢಶಾಲೆ ಬಸ್ಸಾಪುರ ಕಟ್ಟಡ ಕಾಮಗಾರಿ ಕೆಲಸದಲ್ಲಿ ಪ್ಲಾಸ್ಟರಿಂಗ್ ಕೆಲಸ ಬಾಕಿ ಇದ್ದು, ಪ್ರಗತಿ ಹಂತದಲ್ಲಿದೆ.

ಇ. ಆರ್ಥಿಕ ಮಿತಿಯಿಂದಾಗಿ ಕಟ್ಟಡದ ಕಾಮಗಾರಿ ಅಪೂರ್ಣಗೊಂಡಿದೆ.

ಈ. ಸದರಿ ಶಾಲಾ ಕಟ್ಟಗಳನ್ನು ಅನುದಾನದ ಲಭ್ಯತೆಯನ್ನಾದರಿಸಿ ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಳಗಾವಿಯ ಕೆ.ಎಲ್.ಇ ಆಸ್ಪತ್ರೆಯಲ್ಲಿ ಬಡ ರೋಗಿಗಳಿಗೆ ಸರ್ಕಾರದ ಸವಲತ್ತು

2632 (2939) ಶ್ರೀ ಉಮೇಶ್ ವಿಶ್ವನಾಥ್ ವಿ. ಕತ್ತಿ (ಹುಕ್ಕೇರಿ) :— ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಂಗಳೂರಿನ ಜಯದೇವ ಮತ್ತು ಕಿದ್ವಾಯಿ ಆಸ್ಪತ್ರೆಗಳಲ್ಲಿ ಹೃದಯ ಮತ್ತು ಕ್ಯಾನ್ಸರ್ ಚಿಕಿತ್ಸೆಗೆ ಬಂದ ಆರ್ಥಿಕವಾಗಿ ಕಡು ಬಡವ ರೋಗಿಗಳಿಗೆ ಸರ್ಕಾರದಿಂದ ಸವಲತ್ತುಗಳನ್ನು ಒದಗಿಸುತಿದ್ದು, ಉತ್ತರ ಕನ್ನಡ ಭಾಗದ ಆರ್ಥಿಕವಾಗಿ ಕಡು ಬಡವರು ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯಲು ಕಷ್ಟವಾಗಿ ಬೆಳಗಾಂನ ಕೆ.ಎಲ್.ಇ ಆಸ್ಪತ್ರೆಯಲ್ಲಿ ದಾಖಲಾಗಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅಂತಹವರಿಗೆ ಸರ್ಕಾರದಿಂದ ಸವಲತ್ತುಗಳನ್ನು ಒದಗಿಸಲು ಇರುವ ತೊಂದರೆ ಏನು?

ಆ) ಕೆ.ಎಲ್.ಇ ಆಸ್ಪತ್ರೆಯಲ್ಲಿ ಹೃದಯ ಮತ್ತು ಕ್ಯಾನ್ಸರ್ ಕಾಯಿಲೆಯಿಂದಾಗಿ ದಾಖಲಾದ ಕಡು ಬಡ ರೋಗಿಗಳಿಗೂ ಸಹ ಈ ಸೌಲಭ್ಯವನ್ನು ಕಲ್ಪಿಸಲಾಗುವುದೇ?

ಇ) ಹಾಗಿದಲ್ಲಿ ಎಂದಿನಿಂದ ಅನುಷ್ಠಾನಕ್ಕೆ ತರಲಾಗುವುದು?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ಸಚಿವರು) :—

ಅ) ಕರ್ನಾಟಕ ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿಯ ಸಂಸ್ಥೆಯು ಸರ್ಕಾರದ ಆದೇಶ ಸಂಖ್ಯೆ: ಆಕುಕ ೯೮ ಎಂಎಸ್‌ಎಫ್ ೨೦೦೦, ದಿನಾಂಕ: ೩೦.೩.೨೦೦೦ರ ಪ್ರಕಾರ ರೋಗಿಯ ವಾರ್ಷಿಕ ವರಮಾನ ರೂ. ೨೦,೦೦೦ ಗಳಿದ್ದು, ಇವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಪರುಶಿಷ್ಟ ಜಾತಿ ಪಂಗಡ ಹಾಗೂ ಅತಿ ಭೂರಹಿತ ಕಡು ಬಡವರಾಗಿದ್ದು. ರೋಗಿಗಳು ಅವರ ವಾರ್ಷಿಕ ವರಮಾನದ ದೃಢೀಕರಣದ ಪ್ರಮಾಣ ಪತ್ರವನ್ನು ತಹಸೀಲ್ದಾರರಿಂದ ಪಡೆದು ಹಾಗೂ ಹಸಿರು ಕಾರ್ಡು ಹೊಂದಿರುವ ರೋಗಿಗಳು ಅವರ ಕಾಯಿಲೆಯ ತೀಕ್ಷ್ಣತೆಯ ಆಧಾರದ ಮೇಲೆ ಸ್ವಾಯತ್ತೆಯ ಸಂಸ್ಥೆಗಳಿಗೆ ಮತ್ತು ಬೋಧಕ ಆಸ್ಪತ್ರೆಗಳಿಗೆ ಪರಿಹಾರವನ್ನು ನೀಡಿರುತ್ತದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಕುಕ ೯೮ ಎಂಎಂಇ ೯೫ ದಿನಾಂಕ: ೧೮.೫.೯೫ರ ಅನ್ವಯ ಸ್ವಾಯತ್ತೆಯ ಸಂಸ್ಥೆಗಳಿಗೆ ಮತ್ತು ಬೋಧಕ ಆಸ್ಪತ್ರೆಗಳಿಗೆ ಸದಸ್ಯತ್ವ ಕಮಿಟಿಯಿಂದ ಪ್ರತಿ ರೋಗಿಯ ತೀಕ್ಷ್ಣತೆಯ ಕಾಯಿಲೆಯ ಆಧಾರದ ಮೇಲೆ ೨೫,೦೦೦ ಗಳನ್ನು ಮಂಜೂರು ಮಾಡಲು ಅಧಿಕಾರನವನ್ನು ಕೊಟ್ಟಿರುತ್ತದೆ. ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿಯೂ ರೋಗಿಗಳು ಇದರ ಸೌಲಭ್ಯಗಳನ್ನು ಪಡೆದುಕೊಳ್ಳಲು ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಇವರ ಹೆಸರಿನಲ್ಲಿ ಜಂಟಿಯಾಗಿ ಪರಿಹಾರವನ್ನು ಕೊಡಲಾಗಿದ್ದು ರೋಗಿಗಳು ಜಿಲ್ಲಾ ಮಟ್ಟದಲ್ಲಿಯೂ ಇದರ ಸೌಲಭ್ಯಗಳನ್ನು ಪಡೆಯಲಾಗುತ್ತಿದ್ದು ಖಾಸಗಿ ಸಂಸ್ಥೆಯ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಉದರ ಸೌಲಭ್ಯವು ಉದ್ಭವಿಸುವುದಿಲ್ಲ.

ಆ) ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿ ಸಂಸ್ಥೆಯಿಂದ ಬೋಧಕ ಆಸ್ಪತ್ರೆಗಳಿಗೂ ಪರಿಹಾರವನ್ನು ನೀಡಲಾಗುತ್ತಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಮಟ್ಟದ ಸದಸ್ಯತ್ವ ಕಮಿಟಿಯಲ್ಲಿ ಸದಸ್ಯ ಕಾರ್ಯದರ್ಶಿಗಳಾಗಿದ್ದು ಇದರ ಸೌಲಭ್ಯವು ಖಾಸಗೀ ಆಸ್ಪತ್ರೆಗಳಿಗೆ ಕೊಡಲು ಉದ್ಭವವಾಗುವುದಿಲ್ಲ.

ಈ) ಈ ವಿಷಯವು ಕರ್ನಾಟಕ ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ಮಂಡಳಿಗೆ ಸಂಬಂಧಪಟ್ಟಿರುವುದರಿಂದ ಈ ಸೌಲಭ್ಯವು ಉದ್ಭವಿಸುವುದಿಲ್ಲ.

ರಾಷ್ಟ್ರ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳಿಗೆ ಹಣ ಬಿಡುಗಡೆ ಮಾಡುವುದು

2634 (3342) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.